7. ಮಹದೇಶ್ವರ ಸಕ್ಕರೆ ಕಾರ್ಖಾನೆ
8. ತುಂಗಭದ್ರಾ ಶುಗರ್ಸ್
9. ಇಂಡಿಯಾ ಶುಗರ್ಸ್
10. ಗೌರಿಬಿದನೂರು ಸಕ್ಕರೆ ಕಾರ್ಖಾನೆ.

ಉ) ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿರುವ ಸಕ್ಕರೆ ಕಾರ್ಖಾನೆಗಳ ವಿವರ:–

1. ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಅಥಣಿ, ಬೆಳಗಾವಿ ಜಿಲ್ಲೆ.
2. ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ಕುಪ್ಪಟಗಿ, ಖಾನಾಪುರ ತಾಲೂಕು ಬೆಳಗಾವಿ ಜಿಲ್ಲೆ.
3. ಸಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಇಮಾಂಪುರ, ಬೀದರ್ ತಾಲೂಕು ಬೀದರ್ ಜಿಲ್ಲೆ

ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳು ಇರುತ್ತವೆ:

1. ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ
2. ಕೃಷ್ಣಾ ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ
3. ಕೃಷ್ಣ ತೀರ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ
4. ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ
5. ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ
6. ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ
7. ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿ ಲಿಮಿಟೆಡ್
8. ಅನುಭವ ಮಂಟಪ ಶುಗರ್ಸ್
9. ರ್‍ಯಾಮಕೋ ಇಂಡಸ್ಟ್ರೀಸ್ ಲಿಮಿಟೆಡ್
10. ಕರ್ನಾಟಕ ಬ್ರೇವರೀಸ್ ಲಿಮಿಟೆಡ್
11. ಮೈಸೂರು ಗ್ಯೂಟ್ ಪ್ರೋಡಕ್ಟ್ಸ್ ಲಿಮಿಟೆಡ್.

ನಗರಸಭೆ ಮತ್ತು ಪುರಸಭೆಗಳ ಆರ್ಥಿಕ ಪರಿಸ್ಥಿತಿ

1130 (1981): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಗರಸಭೆ ಹಾಗೂ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆಯೇ ?

ಆ) ಹಾಗಿದ್ದಲ್ಲಿ ನಗರಸಭೆ ಮತ್ತು ಪುರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರ್ಕಾರವು ಏನು ಕ್ರಮಕ್ಕೆಗೊಂಡಿದೆ;

ಇ) ನಗರಸಭೆ ಹಾಗೂ ಪುರಸಭೆಗಳಿಗೆ ವಾರ್ಷಿಕ ಎಷ್ಟು ಅನುದಾನ ನೀಡುತ್ತಿದೆ ಹಾಗೂ ಅನುದಾನದ ವಿವರಗಳೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಹೌದು.

ಆ) 93–94ನೇ ಸಾಲಿನ ಜಕಾತಿ ಅನುದಾನವನ್ನು ಶೇಕಡ 15ರಷ್ಟು ಹೆಚ್ಚಿಸಲು ನಿರ್ಧರಿಸಿದೆ.

ಇ) ಅನುದಾನದ ಹೆಸರು	1992-93ರಲ್ಲಿ (ರೂ. ಲಕ್ಷವನ್ನು ಒದಗಿಸಲಾಗಿದೆ)
ಜಕಾತಿ ಅನುದಾನ ಪರಿಹಾರ	8502.78
ಆದರ್ಶ ಮುನಿಸಿಪಾಲಿಟಿಗಳಿಗೆ ನೀಡುವ ಧನ	60.00
ಅಭಿವೃದ್ಧಿ ಅನುದಾನ	250.00
ವಾಹನ ತೆರಿಗೆ ಅಭಿವೃದ್ಧಿ ಅನುದಾನ	810.00
ನೆಹರೂ ರೋಜ್‌ಗಾರ್	350.00

ಹಾಸನ ಮುನಿಸಿಪಾಲಿಟಿಯವರು ಕೆಲವರಿಗೆ ಕಡಿಮೆ ಬೆಲೆಗೆ ಸೈಟುಗಳು ಮಂಜೂರು ಮಾಡಿರುವ ಬಗ್ಗೆ

1131 (1968): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಸಿಟಿ ಮುನಿಸಿಪಾಲಿಟಿಯ ಅಧ್ಯಕ್ಷರು ತಮ್ಮ ಸ್ವಇಚ್ಛೆಯಿಂದ ಅನೇಕ ನಾಗರೀಕರಿಂದ ಕಡಿಮೆ ಬೆಲೆಗೆ ಸೈಟುಗಳನ್ನು ಮಂಜೂರು ಮಾಡಿ ಹಣ ಕಟ್ಟಿಸಿಕೊಂಡಿರುತ್ತಾರೆ. ಈ ಬಗ್ಗೆ ವಿವರ ಕೊಡಿ.

ಆ) ಸರ್ಕಾರದ ಆರ್ಡರಿಲ್ಲದೆ ಅಧ್ಯಕ್ಷರು ಸ್ವತಃ ತಮ್ಮ ಸ್ವಇಚ್ಛೆಯಿಂದ ಸೈಟುಗಳನ್ನು ಸಾರ್ವಜನಿಕರಿಗೆ ಮಂಜೂರು ಮಾಡಬಹುದೆ (ವಿವರ ಕೊಡಿ);

ಇ) ಇಂತಹ ಎಷ್ಟು ಸೈಟಗಳನ್ನು ಹಾಸನ ಪುರಸಭೆಯ ಅಧ್ಯಕ್ಷರ ಆದೇಶದ ಮೇರೆ ಮಂಜೂರು ಮಾಡಿ ಅವರುಗಳ ಹೆಸರಿಗೆ ಖಾತೆ ಮಾಡಲಾಗಿದೆ ? (ವಿವರ ಕೊಡಿ) ಇಂತಹ ಕಾನೂನು ಬಾಹಿರ ಕ್ರಮ ನಡೆಸಲು ಪುರಸಭೆಯ ಅಧ್ಯಕ್ಷರಿಗೆ ಸಹಾಯಕರಾದ ಸರ್ಕಾರಿ ಅಧಿಕಾರಿಗಳ ಮೇಲೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಶ್ರೀ ಸಂಜೀವ್ ಬಿ. ಹೆಗ್ಗಡೆ ಎನ್ನುವವರಿಗೆ 38 x 18 ಅಡಿ ಅಳತೆಯ ನಿವೇಶನವನ್ನು ಅಧ್ಯಕ್ಷರ ಆದೇಶದ ಮೇರೆ ಕೊಡಲಾಗಿದೆ.

ಆ) ಅಧ್ಯಕ್ಷರು ಸ್ವತಃ ತಮ್ಮ ಇಚ್ಛಾನುಸಾರ ನಿವೇಶನ ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಶ್ರೀ ಸಂಜೀವ ಬಿ. ಹೆಗ್ಗಡೆ ಎನ್ನುವವರಿಗೆ ಒಬ್ಬರಿಗೆ ಮಾತ್ರ ಮೇಲೆ ವಿವರಿಸಿದಂತೆ ಅಧ್ಯಕ್ಷರು ಮಂಜೂರು ಮಾಡಿದ್ದಾರೆ.

ಇ) ಮೇಲೆ ತಿಳಿಸಿದಂತೆ ಒಂದು ನಿವೇಶನವನ್ನು ಅಧ್ಯಕ್ಷರ ಆದೇಶದಂತೆ ಕೊಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಮತ್ತು ನೌಕರರ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮದ ಅನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ನಂಜನಗೂಡು ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳ ವಿವರ

1134 (1615): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸಿಪುರ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳು ಎಷ್ಟು; (ವಿವರ ನೀಡುವುದು)

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಾಗೂ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳು ಎಷ್ಟು; (ವಿವರ ನೀಡುವುದು)

ಇ) ಈ ಮೇಲ್ಕಂಡ ಹಾಸ್ಟೆಲ್‌ಗಳ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆಯೇ ? ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು ?

ಈ) ತಾಲ್ಲೂಕಿನಲ್ಲಿ ಇನ್ನು ಹಾಸ್ಟೆಲ್‌ಗಳ ಅವಶ್ಯಕತೆ ಇದೆಯೇ ? ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಸಮಾಜ ಕಲ್ಯಾಣ — ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರುಗಳಿಗೆ

7 ಹಾಸ್ಟೆಲ್‌ಗಳು — 6 ಹಾಸ್ಟೆಲ್‌ಗಳು

ಆ) ವಿವರ ಈ ಕೆಳಕಂಡಂತಿದೆ:

1. ಸರ್ಕಾರಿ ಬಾಲಕರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ನಗರ ನಂಜನಗೂಡು ತಾಲ್ಲೂಕು.	1. ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ ತಗಡೂರು
2. ಸರ್ಕಾರಿ ಬಾಲಕರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಹೆಜ್ಜಿಗೆ, ನಂಜನಗೂಡು ತಾಲ್ಲೂಕು.	2. ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಹೆಮ್ಮರಗಾಳ
3. ಸರ್ಕಾರಿ ಬಾಲಕರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಹುರಾ ನಂಜನಗೂಡು ತಾಲ್ಲೂಕು.	3. ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನಂಜನಗೂಡು ಟೌನ್
4. ಸರ್ಕಾರಿ ಬಾಲಕರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯ, ನಂಜನಗೂಡು ತಾಲ್ಲೂಕು, ತಗಡೂರು	4. ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹುಬ್ಬಳ್ಳಿ
5. ಸರ್ಕಾರಿ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ನಂಜನಗೂಡು	5. ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕೆಸವನಹಳ್ಳಿ
6. ಸರ್ಕಾರಿ ಬಾಲಕರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ನಂಜನಗೂಡು	6. ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ನಂಜನಗೂಡು ಟೌನ್
7. ಅನುದಾನಿತ ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಶಂಕರಾನಂದ, ನಂಜನಗೂಡು ತಾಲ್ಲೂಕು.	

ಇ) ಮೇಲಿನ ವಿದ್ಯಾರ್ಥಿ ನಿಲಯಗಳ ಪೈಕಿ ಹುರಾ ಮತ್ತು ತಗಡೂರಿನಲ್ಲಿರುವ ಬಾಲಕರ ವಿದ್ಯಾರ್ಥಿ ನಿಲಯಗಳು ಹಾಗೂ ನಂಜನಗೂಡಿನಲ್ಲಿರುವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ. ನಂಜನಗೂಡಿನ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ

ಕಾಮಗಾರಿ ಪೂರ್ಣಗೊಂಡಿದೆ. ಉಳಿದ ವಿದ್ಯಾರ್ಥಿ ನಿಲಯಗಳಲ್ಲಿ ಕೆಲಸವು ಪ್ರಗತಿಯಲ್ಲಿದ್ದು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಇಲ್ಲ

ಈ) ಇದೆ. ಇನ್ನು ಎರಡು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಸರ್ಕಾರ ಪರಿಶೀಲಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿವಿಧ ವರ್ಗದ ಮಂಜೂರಾದ ಸಿಬ್ಬಂದಿ

1135 (1880): ಶ್ರೀ ಕೆ. ಕುಶಾಲ (ಸುಳ್ಯ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮೆಟ್ರಿಕ್ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲುಗಳಿಗೆ ವಿವಿಧ ವರ್ಗದ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಆ) ಈ ತನಕ ಇಲಾಖೆ ನೇಮಕಾತಿ ಮಾಡಿದ ಹಾಸ್ಟೆಲುಗಳ ವಿವಿಧ ವರ್ಗದ ಹುದ್ದೆಗಳೆಷ್ಟು;

ಇ) ಈ ತನಕ ಇಲಾಖೆ ನೇಮಕಾತಿ ಮಾಡಲು ಬಾಕಿ ಇರುವ ಹಾಸ್ಟೆಲುಗಳಲ್ಲಿ ವಿವಿಧ ವರ್ಗದ ಹುದ್ದೆಗಳ ಸಂಖ್ಯೆ ಎಷ್ಟು;

ಈ) ಈ ಹುದ್ದೆಗಳನ್ನು ಭರ್ತಿ ಮಾಡಲು ಇಲಾಖೆಯು ಸರಕಾರಕ್ಕೆ ಮಂಜೂರಾತಿ ಪಡೆಯಲು ಕೋರಿದೆಯೆ;

ಉ) ಇದ್ದರೆ ಎಷ್ಟು ವರ್ಷದಿಂದ ಬಾಕಿ ಇದೆ ? ಭರ್ತಿ ಮಾಡಲು ಕೈಗೊಂಡ ಕ್ರಮವೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾದ ಹುದ್ದೆಗಳ ವಿವರಗಳು ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ
1.	ನಿಯಮಪಾಲಕರು	8
2.	ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು	38
3.	ಅಡಿಗೆಯವರು	84
4.	ಅಡಿಗೆ ಸಹಾಯಕರು	47
5.	ಜವಾನರು	4
6.	ಕಾವಲುಗಾರರು	7
	ಒಟ್ಟು	188

ಆ) ಇಲಾಖೆಯು ಈ ತನಕ ನೇಮಕ ಮಾಡಿದ ವಿವಿಧ ವರ್ಗದ ಹುದ್ದೆಗಳ ವಿವರಗಳು ಕೆಳಕಂಡಂತಿವೆ.

1. ನಿಲಯಪಾಲಕರು	4
2. ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು	17
3. ಅಡುಗೆಯವರು	62
4. ಅಡಿಗೆ ಸಹಾಯಕರು	36
5. ಜವಾನರು	3
6. ಕಾವಲುಗಾರರು	2
ಒಟ್ಟು	124

ಇ) ಇಲಾಖೆಯು ನೇಮಕಾತಿ ಮಾಡಲು ಇನ್ನೂ ಬಾಕಿ ಇರುವ ಹುದ್ದೆಗಳ ಸಂಖ್ಯೆ ಕೆಳಕಂಡಂತಿವೆ;

1. ನಿಲಯಪಾಲಕರು	4
2. ವಿದ್ಯಾರ್ಥಿನಿಲಯದ ಮೇಲ್ವಿಚಾರಕರು	21
3. ಅಡಿಗೆಯವರು	22
4. ಅಡಿಗೆ ಸಹಾಯಕರು	11
5. ಜವಾನರು	1
6. ಕಾವಲುಗಾರರು	5
ಒಟ್ಟು	64

ಈ) ಹೌದು.

ಉ) 2-3 ವರ್ಷಗಳಿಂದ ಈ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಆರ್ಥಿಕ ಮಿತವ್ಯಯ ನಿಯಮಗಳನ್ನು ಮತ್ತು ನೇರ ನೇಮಕಾತಿ ನಿರ್ಬಂಧವನ್ನು ಸಡಿಲಿಸಬೇಕಾಗಿದೆ ಹಾಗೂ ನೇರನೇಮಕಾತಿ ಸಮಿತಿಗಳನ್ನು ರಚಿಸಬೇಕಾಗಿದೆ. ಈ ದಿಶೆಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು ಆದಷ್ಟು ಜಾಗ್ರತೆ ಈ ಹುದ್ದೆಗಳನ್ನು ತುಂಬುವ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಬಗ್ಗೆ

1136 (1735): ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಹಿರೆಬಾಗೇವಾಡಿ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಭೂ ಸ್ವಾಧೀನ ಹಣವನ್ನು ಸಹಕಾರಿ ಬ್ಯಾಂಕುಗಳಲ್ಲಿ ಹಣ ಇಟ್ಟಿದ್ದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒಂದು ವೇಳೆ ಹಣ ಇಟ್ಟಿದ್ದಲ್ಲಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಭೂ ಸ್ವಾಧೀನ ಹಣವನ್ನು ಸಹಕಾರಿ ಬ್ಯಾಂಕುಗಳಲ್ಲಿ 1989-90, 1990-91 ಮತ್ತು 1991-92 (ಒದಗಿಸಿ).

ಇ) ಕರ್ನಾಟಕ ಆರ್ಥಿಕ ಸಂಹಿತೆ 1958ರ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಯಾವ ಅಧಿಕಾರಿಗಳು ಸಂದಾಯ ಮಾಡುವುದಕ್ಕೆ ಅರ್ಹರಿರುತ್ತಾರೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ಆರ್ಥಿಕ ಸಂಹಿತೆ 1958ರ ಪ್ರಕಾರ ಮೇಜರ್ ಹೆಡ್ ಆಫ್ ಡಿಪಾರ್ಟ್‌ಮೆಂಟ್‌ನವರು ಆರ್ಹರಿದ್ದು ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987ರ ಪ್ರಕರಣ 13 (3) ರಂತೆ ಆಯುಕ್ತರು, ಮೇಜರ್ ಹೆಡ್ ಆಫ್ ಡಿಪಾರ್ಟ್‌ಮೆಂಟ್ ಇದ್ದ ಕಾರಣ ಆಯುಕ್ತರು ಹಣ ಸಂದಾಯಮಾಡಲು ಆರ್ಹರಿರುತ್ತಾರೆ.

ದಿವಂಗತ ರಾಜೀವ್ ಗಾಂಧಿಯವರ ಸ್ಮರಣಾರ್ಥ ಅಂಗವಿಕಲರಿಗೆ ಸಹಾಯ

1137 (382) ಶ್ರೀ ಜಿ. ರಾಜುಗೌಡ (ಹನೂರು):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿವಂಗತ ರಾಜೀವ್ ಗಾಂಧಿಯವರ ಸ್ಮರಣಾರ್ಥವಾಗಿ ಎಷ್ಟೆಷ್ಟು ಜನ ಅಂಗವಿಕಲರಿಗೆ ಯಾವ ಯಾವ ರೀತಿಯ ಸಹಾಯ ಕಲ್ಪಿಸಲಾಗಿದೆ;

ಆ) ಇದರಿಂದ ಸರ್ಕಾರಕ್ಕೆ ಆಗಿರುವ ವೆಚ್ಚವೆಷ್ಟು;

ಇ) ಈ ಯೋಜನೆಗಳ ಸೌಲಭ್ಯದಿಂದ ಇನ್ನೂ ಎಷ್ಟು ಜನ ಅಂಗವಿಕಲರು ವಂಚಿತರಾಗಿದ್ದಾರೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) "ರಾಜೀವ್ ಪೂರ್ಣಾಂಗ ಯೋಜನೆ" ಎಂಬ ಹೊಸ ಯೋಜನೆಯನ್ನು ದಿನಾಂಕ 21-5-1992ರಲ್ಲಿ ಪ್ರಾರಂಭಿಸಲಾಗಿದ್ದು, ಅಂಗವಿಕಲರಿಗಾಗಿ ಇದರಲ್ಲಿ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಪ್ರತಿಯೊಂದು ವಿಧಾನಸಭಾ ಮತಕ್ಷೇತ್ರಕ್ಕೆ ತಲಾ 20 ಸಾದಾ ತ್ರಿಚಕ್ರ ವಾಹನಗಳಂತೆ ಒಟ್ಟು 4480 ವಾಹನಗಳನ್ನು ಅಂಗವಿಕಲರಿಗೆ ವಿತರಿಸುವುದು.

2. 100 ಸಾದಾ ದೂರವಾಣಿಗಳನ್ನು, 20 ಐಎಸ್‌ಡಿ:ಎಸ್‌ಟಿಡಿ: ಟೆಲಿಫೋನ್ ಬೂತ್‌ಗಳನ್ನು ರಾಜ್ಯಾದ್ಯಂತ ವಿತರಿಸುವುದು.

3. ರಾಜ್ಯಾದ್ಯಾಂತ ವಿಶ್ವಯೋಜನೆಯಡಿಯಲ್ಲಿ 100 ತರಬೇತಿ ಹಾಗೂ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದು. ಇದನ್ನು ಕೈಗಾರಿಕಾ ವಾಣಿಜ್ಯ ಇಲಾಖೆಯಡಿಯಲ್ಲಿ ಜಾರಿಗೊಳಿಸಲಾಗುವುದು.

4. ಮಹಿಳಾ ಅಭಿವೃದ್ಧಿ ನಿಗಮದಲ್ಲಿ ವಿಶೇಷ ಅಧಿಕಾರಿಯ ಹುದ್ದೆಯನ್ನು ಸೃಷ್ಟಿಸುವುದು

5. ಅಂಗವಿಕಲರಿಗಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರುವ ನಿಗಮಗಳ ಆರ್ಥಿಕ ಕಾರ್ಯಕ್ರಮಗಳನ್ನು ವಿಸ್ತರಿಸುವುದು. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮ ಮತ್ತು ಮಹಿಳಾ ಅಭಿವೃದ್ಧಿ.

6. ರಾಜೀವ್ ಗಾಂಧಿ ಸ್ಮಾರಕ ಸಂಪನ್ಮೂಲ ಕೇಂದ್ರ ಬೆಂಗಳೂರಿನಲ್ಲಿ ಸ್ಥಾಪಿಸುವುದು. ಈ ಮೂಲಕ ಅಂಗವಿಕಲರಿಗಾಗಿ ಶ್ರಮಿಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಬಹುದು.

7. ಅಂಗವಿಕಲರಿಗಾಗಿ ಇರುವ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಅಂಗವಿಕಲರಿಗಾಗಿ ಇರುವ ವೃತ್ತಿ ತರಬೇತಿಗಳನ್ನು ಆಧುನೀಕರಣಗೊಳಿಸುವುದು.